# <u>ನೀನಿರಲು ನಮಗೇತರ ಭಯವೋ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 343
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 305
3. **Note:** Lyrics given without highlights are as per Ref. 1. The wordings as per Ref. 2 are slightly different which are mentioned in yellow highlights.
4. **Note:** Singer has followed lyrics as in Ref. 1.

ರಾಗ ಕಾಪಿ ತಾಳ: ಚಾಪು

ನೀನಿರಲು ನಮಗೇತರ ಭಯವೋ
ಸನಕಾದಿಗಳ ಪ್ರಿಯ ತಿರುವೇಂಗಳಯ್ಯ || ಪ ||

ಚರಣದಿಂದುದಿಸಿದವಳ ಸುತನ (ಮುಮ್ಮನ) (ಮೊಮ್ಮಗನ) ಸತಿ
ಭರದಿಂದ ನಿಮ್ಮ ಸ್ತೋತ್ರವ ಮಾಡಲು
ಹರುಷದಿಂದ ಕೇಳಿ (ನಲಿದು ದೈವನ) (ನಲಿದೈವರ)
ನಾರಿ ಲಜ್ಜೆಯ ಕಾಯಿದ ಕರುಣ ದಯಾಸಿಂಧು || ೧ ||

ಕ್ಷುಧೆಯಿಂದ ಬಂದ ಅಗಸ್ತ್ಯ ಮುನಿ ಶಾಪದಲಿ
ಮದಯುತನಾಗಿ ತಾನು ಗಜನಾಗಿರೆ
ಅಘಟವಾಗಿದ್ದ ನೆಗಳಿಗೆ ಸಿಲ್ಕಿ ಧೇನಿಸಲು
ನಿಜ ಚಕ್ರದಲಿ ಕಾಯಿದ ಗಜರಾಜ ವರದ || ೨ ||

ನೀರ ಬೊಬ್ಬುಳಿಯಂತೆ ನಿತ್ಯವಲ್ಲವೊ ದೇಹ
ಘೋರ ಸಂಸಾರದೊಳು ತೊಳಲಬೇಡ
ಶ್ರೀ ರಮಣ ಪುರಂದರ ವಿಠಲ ಪರದೈವವೆಂದು
ಸಾರುತಿರಲು ಮನವೆ ಸುಮ್ಮನಿರಲು ಬೇಡ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ತಿರುವೇಂಗಳಯ್ಯ** - ತಿರುವೇಂಗಡದ ಒಡೆಯ, ವೆಂಕಟಾಚಲಪತಿ.

**ಚರಣದಿಂದುದಿಸಿದವಳ ಸುತನ**... - ಗಂಗೆಯ ಮಗನಾದ ಭೀಷ್ಮನ ಮೊಮ್ಮಗನ ವಾವೆಯಲ್ಲಿದ್ದ ಯುಧಿಷ್ಠಿರನ ಹೆಂಡತಿಯಾದ ದ್ರೌಪದಿಯು.

**ಭರದಿಂದ** - ತುಂಬಿದ ಸಭೆಯಲ್ಲಿ ದು:ಶಾಸನನು ತನ್ನ ಸೀರೆ ಸೆಳೆಯುತ್ತಿರುವಾಗ.

**ಐವರ ನಾರಿ** - ಪಾಂಡವರೈವರ ಹೆಂಡತಿ ದ್ರೌಪದಿ.

**ಕ್ಷುದೆಯಿಂದ**... – ಗಜೇಂದ್ರ ಮೋಕ್ಷದ ಕಥೆ.  ಪಾಂಡ್ಯ ದೇಶದ ದೊರೆ ಇಂದ್ರದ್ಯುಮ್ನನು ತನ್ನ ಮನೆಗೆ ಬಂದ ಅಗಸ್ತ್ಯರನ್ನು ಅಸಡ್ಡೆಯಿಂದ ಕಂಡನಾಗಿ ಅಗಸ್ತ್ಯನು ಅವನನ್ನು ಆನೆಯಾಗೆಂದು ಶಪಿಸಿ ಹೋದನು.

**ಧೇನಿಸಲು** - ಧ್ಯಾನಿಸಲು.

**ನೆಗಳಿ** - ಮೊಸಳೆ.

**ನಿಜ ಚಕ್ರದಲಿ** - ತನ್ನ ಚಕ್ರವನ್ನು ಮೊಸಳೆಯೆಡೆಗೆ ಹರಿಹಾಯಿಸಿ.

**ನೀರ ಬೊಬ್ಬುಳಿ** - ನೀರ ಮೇಲಣ ಗುಳ್ಳೆ.

**Classification:** Keerthane
**Ankita:** purandara vittala
**Location:** Tirupati
**Category:** Srinivasa Stuti, Vishnu Stuti
**Sub-Category:** Vishnu, srinivasa, bhaya, Priya, maga, nachike, Dhyana, chakra, patni, santosha, daiva, draupadi, hennu, karuna, daya, muni, shapa, gaja, mosale, niru, deha, samsara, mana, Tirupati,
**Pravachana:** NA
**Explanation:** NA